# ಸಮಸ್ಯೆ ಸತ್ಯ, ಪರಿಹಾರಕ್ಕೆ ಸರ್ವ ಪ್ರಯತ್ನ: ಬಿಎಸ್ನೆನ್ನೆಲ್

**ಬೆಂಗಳೂರು:** ರಾಜ್ಯದಲ್ಲಿ ಬಿಎಸ್ಎನ್ಎಲ್‌ನಿಂದ ಸೂಕ್ತ ಸೇವೆ ಸಿಗದೆ ಪರದಾಡುತ್ತಿರುವುದು ಸತ್ಯ. ಗ್ರಾಹಕರ ಸಮಸ್ಯೆಗಳನ್ನು ಪರಿಹರಿಸಲು ಸಂಸ್ಥೆ ಹಿಂಜರಿಯದೆ, ಸರ್ವ ಯತ್ನ ನಡೆಸುತ್ತಿದೆ ಎಂದು ಆಲ್ ಇಂಡಿಯಾ ಬಿಎಸ್ಎನ್ಎಲ್ ಎಕ್ಸಿಕ್ಯೂಟಿವ್ ಅಸೋಸಿಯೇಷನ್ ಹೇಳಿದೆ.

ಬಿಎಸ್ಎನ್ಎಲ್ ಬವಣೆಗಳ ಬಗ್ಗೆ ಕನ್ನಡಪ್ರಭ ನ.20ರಿಂದ ಪ್ರಕಟಿಸಿದ್ದ ಸರಣಿ ವರದಿಗಳಲ್ಲಿ ವಾಸ್ತವಾಂಶವಿತ್ತು. ಗ್ರಾಹಕರು ಅನುಭವಿಸುತ್ತಿರುವ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಸಂಸ್ಥೆಯಲ್ಲಿ ಸಿಬ್ಬಂದಿ ಇಲ್ಲದಂತಾಗಿದೆ. ಹಾಗೆಯೇ ಉಪಕರಣಗಳ ಪೂರೈಕೆ ಇಲ್ಲದಿರುವುದೂ ಕಾರಣ ಎಂದು ಅಸೋಸಿಯೇಷನ್‌ನ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಶಶಿಧರ್ ಕೆ. ಹಿರೇಮಠ್ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರು ಒಂದರಲ್ಲೇ ಬಿಎಸ್ಎನ್ಎಲ್ 7 ಲಕ್ಷ ಗ್ರಾಹಕರನ್ನು ಹೊಂದಿದ್ದು, ಇವರಲ್ಲಿ 3 ಲಕ್ಷ ಬ್ರಾಡ್‌ಬ್ಯಾಂಡ್ ಗ್ರಾಹಕರೇ ಇದ್ದಾರೆ. ಆಲ್ ಇಂಡಿಯಾ ಬಿಎಸ್ಎನ್ಎಲ್ ಎಕ್ಸಿಕ್ಯೂಟಿವ್ ಅಸೋಸಿಯೇಷನ್ ಸುಮ್ಮನೆ ಕುಳಿತಿಲ್ಲ. ಗ್ರಾಹಕರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಕೇಂದ್ರ ಕಚೇರಿಯ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದೆ ಎಂದಿದ್ದಾರೆ.

> **ಬಿಎಸ್ಎನ್ಎಲ್ ಬವಣೆ** BSNL
>
> **ಕನ್ನಡಪ್ರಭದಲ್ಲಿ ಪ್ರಕಟಿತ ಸರಣಿ ವರದಿಯಲ್ಲಿ ವಾಸ್ತವಾಂಶವಿತ್ತು: ಕೆ. ಹಿರೇಮಠ್**

ಹೆಚ್ಚು ಗ್ರಾಹಕರಿರುವ ಬೆಂಗಳೂರಿನ ಅನೇಕ ಕಡೆ ಜಲಮಂಡಳಿ ಹೊಸ ಮಾರ್ಗಗಳನ್ನು ಅಳವಡಿಸುವುದು ಮತ್ತು ಹಳೇ ಪೈಪ್‌ಗಳ ದುರಸ್ತಿ ಹಾಗೂ ಒಳಚರಂಡಿ ವ್ಯವಸ್ಥೆಗಾಗಿ ರಸ್ತೆಗಳನ್ನು ಅಗೆಯುತ್ತಿದೆ. ಈ ಸಂದರ್ಭದಲ್ಲಿ ಅನೇಕ ಕಡೆ 1200 ಜತೆವರೆಗಿನ ಬಿಎಸ್ಎನ್ಎಲ್ ಕೇಬಲ್‌ಗಳು ನಾಶವಾಗಿವೆ. ಈ ಕೇಬಲ್‌ಗಳನ್ನು ಪೂರೈಸುವ ಸಂಸ್ಥೆಗಳ ಬಳಿಯೆ ದಾಸ್ತಾನಿಲ್ಲದೆ ನಮಗೆ ಪೂರೈಕೆಯಾಗುತ್ತಿಲ್ಲ. ಹೀಗಾಗಿ ಸಂಪರ್ಕ ಕಡಿತ ಸಮಸ್ಯೆಗಳನ್ನು ಸದ್ಯ ಪರಿಹರಿಸಲು ಆಗುತ್ತಿಲ್ಲ ಎಂದು ಅವರು ಹೇಳಿದ್ದಾರೆ.